## **ಕರ್ನಾಟಕ ಭೂ (ವರ್ಗಾವಣೆಯ ಮೇಲೆ ನಿರ್ಬಂಧ) ಅಧಿನಿಯಮ, 1991**

## **ಪ್ರಕರಣಗಳ ಕ್ರಮಪಟ್ಟಿ**

ಪ್ರಕರಣಗಳು:

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.
2. ಪರಿಭಾಷೆಗಳು.
3. ಸರ್ಕಾರವು ಆರ್ಜಿಸಿರುವ ಭೂಮಿಗಳ ವರ್ಗಾವಣೆಯ ಮೇಲೆ ನಿಷೇಧ.
4. ಆರ್ಜನೆಯ ವ್ಯವಹರಣೆಗಳನ್ನು ಪ್ರಾರಂಭಿಸಿರುವ ಭೂಮಿಗಳ ಸಂಬಂಧದಲ್ಲಿನ ವರ್ಗಾವಣೆಯ ನಿಯಂತ್ರಣ.
5. 4ನೇ ಪ್ರಕರಣದ ಅಡಿಯಲ್ಲಿ ವರ್ಗಾವಣೆಯ ಅನುಮತಿಯ ನೀಡಿಕೆಗಾಗಿ ಅರ್ಜಿ.
6. ಸಕ್ಷಮ ಪ್ರಾಧಿಕಾರದ ಆದೇಶಗಳ ವಿರುದ್ಧ ಅಪೀಲುಗಳು.
7. ಭೂಮಿಯ ವರ್ಗಾವಣೆಗೆ ಅನುಮತಿ ನೀಡಲು ನಿರಾಕರಿಸುವ ಆದೇಶಗಳು ಜಾರಿಯಲ್ಲಿರುವ ಅವಧಿ.
8. ಭೂಮಿಯ ವರ್ಗಾವಣೆಯ ನೋಂದಣಿಗೆ ನಿರ್ಬಂಧಗಳು.
9. ದಂಡಗಳು.
10. ಕಂಪನಿಗಳಿಂದ ಅಪರಾಧಗಳು.
11. ನಿಯಮಗಳ ರಚನಾಧಿಕಾರ.

* * * *

## **ಉದ್ದೇಶ ಮತ್ತು ಕಾರಣಗಳ ಹೇಳಿಕೆ**

**1992ರ ಅಧಿನಿಯಮ ಸಂಖ್ಯೆ 17.-** ಬೆಂಗಳೂರು ನಗರ ಮತ್ತು ಇತರ ನಗರ ಪ್ರದೇಶಗಳಲ್ಲಿ ಅತ್ಯಂತ ಅಗತ್ಯವಿರುವ ನಿವೇಶನಗಳ ರೂಪಣೆ ಮತ್ತು ಹಂಚಿಕೆಯನ್ನು ಹೆಚ್ಚಿಸುವಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ನಗರಾಭಿವೃದ್ಧಿ ಪ್ರಾಧಿಕಾರಗಳು ಎದುರಿಸುತ್ತಿರುವ ಕೆಲವು ಪ್ರಮುಖ ಬಿಕ್ಕಟ್ಟುಗಳು ಈ ಮುಂದಿನಂತಿವೆ;

(1) ಮುಂಗಡವಾಗಿ ಹಣ ಸಂಗ್ರಹಿಸಿ, ಮಾರಾಟ ಪತ್ರವನ್ನು ನೋಂದಾಯಿಸುವ ಮೂಲಕ ಅಥವಾ ಮುಖ್ತ್ಯಾರನಾಮ ಬರೆದುಕೊಡುವ ಮೂಲಕ ಅಥವಾ ಮಾರಾಟದ ಒಪ್ಪಂದಗಳ ಮೂಲಕ ಬಾಧಿತ ಭೂಧಾರಕರಿಂದ ನಿವೇಶಗಳ ಅನಧಿಕೃತ ಮಾರಾಟ;

(2) ಮೇಲೆ ನಮೂದಿಸಲಾದ ಮಾರಾಟ ಪತ್ರಗಳು ಮತ್ತು ಮುಖ್ತ್ಯಾರನಾಮದ ಅಡಿಯಲ್ಲಿನ ಬೆಂಗಳೂರು ಮತ್ತು ಇತರ ನಗರ ಪ್ರದೇಶಗಳ ವಿವಿಧ ಭಾಗಗಳಲ್ಲಿ ವರ್ಗಾವಣೆದಾರರಿಂದ ಅನಧಿಕೃತ ನಿರ್ಮಾಣ ಕಾರ್ಯ.

ಆರ್ಜನೆಗಾಗಿ ಅಧಿಸೂಚಿಸಲಾದ ಪ್ರದೇಶಗಳಲ್ಲಿರುವ ಭೂಮಿಯ ಮೌಲ್ಯವು ಏರುತ್ತಿದ್ದು, ಯಾವುದಕ್ಕೂ ಹೇಸದ ಅನೇಕ ಮಂದಿ ಭೂಧಾರಕರು ವಿವಿಧ ಕಾನೂನುಗಳನ್ನು ಉಲ್ಲಂಘಿಸಿ, ಸಂದೇಹ ಪಡದ ಖರೀದಿದಾರರಿಗೆ ತಮ್ಮ ಭೂಮಿಗಳನ್ನು ಮಾರಾಟ ಮಾಡಿ ಅದರ ಪ್ರಯೋಜನ ಪಡೆಯುತ್ತಿದ್ದಾರೆ. ವರ್ಗಾವಣೆ ಹೊಂದಿದವರು, ನಂತರ, ಅನಧಿಕೃತ ನಿರ್ಮಾಣದಲ್ಲಿ ತೊಡಗಿ ಭೂ ಅರ್ಜನೆ ಮತ್ತು ಯೋಜಿತ ನಗರಾಭಿವೃದ್ಧಿ ಕಾರ್ಯವಿಧಾನವನ್ನು ಅಸಾಧ್ಯವಲ್ಲದಿದ್ದರೂ ಕಷ್ಟವನಿಸುತ್ತಿದ್ದಾರೆ.

ದೇಶದಲ್ಲಿನ ಇತರ ರಾಜ್ಯಗಳಲ್ಲಿ ಅಂಗೀಕರಿಸಲಾದ ಇಂಥವೇ ಕಾನೂನುಗಳು ಅನಧಿಕೃತ ವ್ಯವಹಾರಗಳನ್ನು ತಡೆಯುವಲ್ಲಿ ಬಹಳಷ್ಟು ಸಹಕಾರಿಯಾಗಿದೆ. ಪ್ರಸ್ತುತ ಕ್ರಮವು ಭೂ ಆರ್ಜನೆಯ ಕಾರ್ಯದಲ್ಲಿ ಬರುವ ತೊಂದರೆಗಳನ್ನು ತಡೆಯಲು ಮತ್ತು ನಿವೇಶನಗಳ ಶೀಘ್ರ ರೂಪಣೆ ಮತ್ತು ಹಂಚಿಕೆ ಮಾಡಲು ನೆರವಾಗುತ್ತದೆಂದು ನಿರೀಕ್ಷಿಸಲಾಗಿದೆ.

ಅದ್ದರಿಂದ ವಿಧೇಯಕ

(ವಿಧಾನಸಭೆ ವಿಧೇಯಕ 1991ರ ಸಂಖ್ಯೆ 7 ರಲ್ಲಿದ್ದಂತೆ 21-3-1991ರ ಕರ್ನಾಟಕ ರಾಜ್ಯ ಪತ್ರ (ವಿಶೇಷ ಪತ್ರಿಕೆ) ಭಾಗ 4-2ಎ ರಲ್ಲಿ ನಂ.124 ಎಂಬುದಾಗಿ ಪ್ರಕಟವಾಗಿದೆ.)

* * * *

1992ರ ಕರ್ನಾಟಕ ಅಧಿನಿಯಮ ಸಂಖ್ಯೆ 17

(1992ರ ಮೇ 16ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

# ಕರ್ನಾಟಕ ಭೂ (ವರ್ಗಾವಣೆಯ ಮೇಲೆ ನಿರ್ಬಂಧ) ಅಧಿನಿಯಮ, 1991

(1992ರ ಮೇ 12ನೇ ದಿನಾಂಕದಂದು ರಾಷ್ಟ್ರಪತಿಯವರ ಅನುಮತಿ ಪಡೆಯಲಾಗಿದೆ)

**ಸರ್ಕಾರವು ಆರ್ಜಿಸಿರುವ ಭೂಮಿ ಅಥವಾ ಸರ್ಕಾರದಿಂದ ಆರ್ಜನೆ ವ್ಯವಹರಣೆಗಳನ್ನು ಪ್ರಾರಂಭಿಸಲಾಗಿರುವ ಭೂಮಿಯ ವರ್ಗಾವಣೆಯ ಮೇಲೆ ಸಂದರ್ಭಾನುಸಾರ, ಉದ್ದೇಶಿತ ವರ್ಗಾವಣೆಯ ಅಧಿಕ ಪ್ರಮಾಣದ ವ್ಯವಹಾರವನ್ನು ಅಥವಾ ಅಂಥ ಭೂಮಿಗಳನ್ನು ಅದರ ಅರಿವಿಲ್ಲದ ಜನತೆಗೆ ವರ್ಗಾಯಿಸುವುದನ್ನು ತಡೆಹಿಡಿಯುವ ದೃಷ್ಟಿಯಿಂದ ಕೆಲವು ನಿರ್ಬಂಧಗಳನ್ನು ವಿಧಿಸಲು ಒಂದು ಅಧಿನಿಯಮ.**

ಇದರಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಸರ್ಕಾರವು ಆರ್ಜಿಸಿರುವ ಭೂಮಿ ಅಥವಾ ಸರ್ಕಾರದಿಂದ ಆರ್ಜನೆ ವ್ಯವಹರಣೆಗಳನ್ನು ಪ್ರಾರಂಭಿಸಲಾಗಿರುವ ಭೂಮಿಯ ವರ್ಗಾವಣೆಯ ಮೇಲೆ, ಸಂದರ್ಭಾನುಸಾರ, ಉದ್ದೇಶಿತ ವರ್ಗಾವಣೆಯ ಅಧಿಕ ಪ್ರಮಾಣದ ವ್ಯವಹಾರವನ್ನು ಅಥವಾ ಅಂಥ ಭೂಮಿಗಳನ್ನು, ಅರಿವಿಲ್ಲದ ಜನತೆಗೆ ವರ್ಗಾಯಿಸುವುದನ್ನು ತಡೆಹಿಡಿಯುವ ದೃಷ್ಟಿಯಿಂದ, ಕೆಲವು ನಿಬರ್ಂಧಗಳನ್ನು ವಿಧಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ನಲವತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಭೂ (ವರ್ಗಾವಣೆಯ ಮೇಲೆ ನಿರ್ಬಂಧ) ಅಧಿನಿಯಮ, 1991 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯಿಸತಕ್ಕದ್ದು.

(3) ಇದು, ಸರ್ಕಾರವು, ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ಅಂಥ [1][ದಿನಾಂಕದಂದು][1] ಜಾರಿಯಲ್ಲಿ ಬರತಕ್ಕದ್ದು ಮತ್ತು ಬೇರೆ ಬೇರೆ ನಗರ ಪ್ರದೇಶಗಳಿಗಾಗಿ ಬೇರೆ ಬೇರೆ ದಿನಾಂಕಗಳನ್ನು ನಿರ್ದಿಷ್ಟಪಡಿಸಬಹುದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಸಕ್ಷಮ ಪ್ರಾಧಿಕಾರಿ" ಎಂದರೆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಪ್ರದೇಶಗಳಿಗಾಗಿ ಈ ಅಧಿನಿಯಮದ ಅಡಿಯಲ್ಲಿ ಸಕ್ಷಮ ಪ್ರಾಧಿಕಾರದ ಪ್ರಕಾರ್ಯಗಳನ್ನು ನೆರವೇರಿಸಲು ಅಧಿಸೂಚನೆಯ ಮೂಲಕ ಸರ್ಕಾರದಿಂದ ಪ್ರಾಧಿಕೃತನಾದ ಒಂದು ಜಿಲ್ಲೆಯ ಡೆಪ್ಯುಟಿ ಕಮಿಷನರ್ ದರ್ಜೆಗೆ ಕಡಿಮೆಯದಲ್ಲದ ದರ್ಜೆಯ ಯಾವೊಬ್ಬ ವ್ಯಕ್ತಿ ಅಥವಾ ಪ್ರಾಧಿಕಾರಿ.

(ಬಿ) "ಸರ್ಕಾರ" ಎಂದರೆ ರಾಜ್ಯ ಸರ್ಕಾರ;

(ಸಿ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳಿಂದ ನಿಯಮಿಸಲಾದುದು;

(ಡಿ) "ಯೋಜನೆ" ಎಂದರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1976ರ ಅಥವಾ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987ರ 15ನೇ ಪ್ರಕರಣದ ಅಡಿಯಲ್ಲಿ ರೂಪಿಸಲಾದ ಮತ್ತು ಸರ್ಕಾರದಿಂದ ಮಂಜೂರಾದ ಅಭಿವೃದ್ಧಿ ಯೋಜನೆ;

(ಇ) "ನಗರ ಪ್ರದೇಶ" ಎಂದರೆ,-

(i) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1976ರಲ್ಲಿ ಪರಿಭಾಷಿಸಲಾದಂತೆ ಬೆಂಗಳೂರು ಮಹಾನಗರ ಪ್ರದೇಶ;

(ii) ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987ರ 3ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ಯಾವ ನಗರಪ್ರದೇಶಕ್ಕೆ ಒಂದು ನಗರಾಭಿವೃದ್ಧಿ ಪ್ರಾಧಿಕಾರವನ್ನು ರಚಿಸಲಾಗಿದೆಯೋ ಆ ನಗರ ಪ್ರದೇಶ.

**3. ಸರ್ಕಾರವು ಆರ್ಜಿಸಿರುವ ಭೂಮಿಗಳ ವರ್ಗಾವಣೆಯ ಮೇಲೆ ನಿಷೇಧ.-** ಭೂ ಆರ್ಜನಾ ಅಧಿನಿಯಮ, 1894 (1894ರ ಕೇಂದ್ರಾಧಿನಿಯಮ 1)ರ ಅಥವಾ ಸಾರ್ವಜನಿಕ ಉದ್ದೇಶಕ್ಕಾಗಿ ಭೂಮಿಯನ್ನು ಆರ್ಜಿಸುವುದಕ್ಕೆ ಉಪಬಂಧ ಕಲ್ಪಿಸುವ ಯಾವುದೇ ಇತರ ಕಾನೂನಿನ ಅಡಿಯಲ್ಲಿ ಸರ್ಕಾರವು ಆರ್ಜಿಸಿರುವ ಯಾವುದೇ ನಗರ ಪ್ರದೇಶದಲ್ಲಿ ಇರುವ ಯಾವುದೇ ಭೂಮಿ ಅಥವಾ ಅದರ ಭಾಗವನ್ನು ಮಾರಾಟ, ಅಡಮಾನ, ದಾನ, ಗುತ್ತಿಗೆ, ಅಥವಾ ಅನ್ಯಥಾ ವರ್ಗಾವಣೆ ಮಾಡಲು ಯಾವೊಬ್ಬ ವ್ಯಕ್ತಿಯೂ ಉದ್ದೇಶಿಸತಕ್ಕದ್ದಲ್ಲ.

**4. ಆರ್ಜನೆಯ ವ್ಯವಹರಣೆಗಳನ್ನು ಪ್ರಾರಂಭಿಸಿರುವ ಭೂಮಿಗಳ ಸಂಬಂಧದಲ್ಲಿನ ವರ್ಗಾವಣೆಯ ನಿಯಂತ್ರಣ.-** ಸಕ್ಷಮ ಪ್ರಾಧಿಕಾರಿಯ ಲಿಖಿತ ಪೂರ್ವಾನುಮೋದನೆಯೊಂದಿಗೆ ಹೊರತು, ಯಾವೊಬ್ಬ ವ್ಯಕ್ತಿಯು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1976ರ 19ನೇ ಪ್ರಕರಣ ಅಥವಾ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987ರ 19ನೇ ಪ್ರಕರಣದ ಅಡಿಯಲ್ಲಿ ಘೋಷಣೆಯನ್ನು ಪ್ರಕಟಿಸಲಾದ ಯೋಜನೆಯ ಸಂಬಂಧದಲ್ಲಿ ಆರ್ಜಿಸಲು ಉದ್ದೇಶಿಸಲಾದ ಯಾವುದೇ ನಗರ ಪ್ರದೇಶದಲ್ಲಿರುವ ಯಾವುದೇ ಭೂಮಿ ಅಥವಾ ಅದರ ಭಾಗವನ್ನು ಮಾರಾಟ, ಅಡಮಾನ, ದಾನ, ಗುತ್ತಿಗೆಯ ಮೂಲಕ ಅಥವಾ ಅನ್ಯಥಾ ವರ್ಗಾಯಿಸತಕ್ಕದ್ದಲ್ಲ ಅಥವಾ ವರ್ಗಾಯಿಸಲು ಉದ್ದೇಶಿಸತಕ್ಕದ್ದಲ್ಲ.

**5. 4ನೇ ಪ್ರಕರಣದ ಅಡಿಯಲ್ಲಿ ವರ್ಗಾವಣೆಯ ಅನುಮತಿಯ ನೀಡಿಕೆಗಾಗಿ ಅರ್ಜಿ.-** 4ನೇ ಪ್ರಕರಣದಲ್ಲಿ ಹೇಳಲಾದ ಯಾವುದೇ ಭೂಮಿಯನ್ನು ಮಾರಾಟ, ಅಡಮಾನ, ದಾನ, ಗುತ್ತಿಗೆಯ ಮೂಲಕ ಅಥವಾ ಅನ್ಯಥಾ ವರ್ಗಾವಣೆ ಮಾಡಲು ಇಚ್ಛಿಸುವ ಯಾವೊಬ್ಬ ವ್ಯಕ್ತಿಯು, ನಿಯಮಿಸಬಹುದಾದಂಥ ವಿವರಗಳನ್ನು ಒಳಗೊಂಡ ಲಿಖಿತ ಅರ್ಜಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ಒಂದು ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಸಕ್ಷಮ ಪ್ರಾಧಿಕಾರವು ತಾನು ಉಚಿತವೆಂದು ಭಾವಿಸಬಹುದಾದ ಅಂಥ ವಿಚಾರಣೆಯನ್ನು ನಡೆಸಿದ ತರುವಾಯ ಸಲ್ಲಿಸಲಾದ ಅರ್ಜಿಯ ಮೇಲಿನ ಅನುಮತಿಯನ್ನು, ಲಿಖಿತ ಆದೇಶದ ಮೂಲಕ ನೀಡಬಹುದು ಅಥವಾ ನೀಡಲು ನಿರಾಕರಿಸಬಹುದು.

(3) ಸಕ್ಷಮ ಪ್ರಾಧಿಕಾರವು, ಈ ಮುಂದಿನ ಒಂದು ಅಥವಾ ಹೆಚ್ಚಿನ ಕಾರಣಗಳ ಮೇಲೆ ಎಂದರೆ:-

(i) ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಭೂಮಿಯ ಅಗತ್ಯವಿದೆ ಅಥವಾ ಅಗತ್ಯವಿರುವ ಸಂಭವವಿದೆ;

(ii) ಭೂಮಿಗಳು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1976ರ ಅಡಿಯಲ್ಲಿ ರಚಿಸಲಾದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಥವಾ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1987ರ ಅಡಿಯಲ್ಲಿ ರಚಿಸಲಾದ ಯಾವುದೇ ನಗರಾಭಿವೃದ್ಧಿ ಪ್ರಾಧಿಕಾರದ ಉದ್ದೇಶಗಳನ್ನು ಸುನಿಶ್ಚಿತಗೊಳಿಸುವ ಅಗತ್ಯವಿದೆ ಅಥವಾ ಅಗತ್ಯವಿರುವ ಸಂಭವವಿದೆ;

(iii) ಭೂಮಿಯು, ಸಾರ್ವಜನಿಕ ಕಟ್ಟಡಗಳು ಮತ್ತು ಇತರ ಸಾರ್ವಜನಿಕ ಕಾಮಗಾರಿಗಳು ಮತ್ತು ಉಪಯುಕ್ತತೆಗಳು, ರಸ್ತೆಗಳು, ಗೃಹನಿರ್ಮಾಣ, ಮನರಂಜನೆ, ಕೈಗಾರಿಕೆ, ವ್ಯಾಪಾರ ಮಾರುಕಟ್ಟೆಗಳು, ಶಾಲೆಗಳು ಮತ್ತು ಇತರ ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು ಮತ್ತು ಸಾರ್ವಜನಿಕ ಖಾಲಿ ಜಾಗಗಳ ಮತ್ತು ಸಾರ್ವಜನಿಕ ಬಳಕೆಗಳ ಇತರ ಪ್ರವರ್ಗಗಳಂಥವುಗಳಿಗೆ ಅಗತ್ಯವಿದೆ ಅಥವಾ ಅಗತ್ಯವಿರುವ ಸಂಭವವಿದೆ;

-ಎಂಬುದರ ಹೊರತು, ಈ ಪ್ರಕರಣದ ಅಡಿಯಲ್ಲಿ ಸಲ್ಲಿಸಲಾದ ಅರ್ಜಿಯ ಮೇಲಿನ ಅನುಮತಿಯನ್ನು ನೀಡಲು ನಿರಾಕರಿಸತಕ್ಕದ್ದಲ್ಲ.

(4) ಸಕ್ಷಮ ಪ್ರಾಧಿಕಾರವು ಸಲ್ಲಿಸಲಾದ ಅರ್ಜಿಯ ಮೇಲಿನ ಅನುಮತಿಯನ್ನು ನೀಡಲು ನಿರಾಕರಿಸಿದಲ್ಲಿ ಅದು ಹಾಗೆ ಮಾಡಲು ಕಾರಣಗಳನ್ನು ಲಿಖಿತದಲ್ಲಿ ಅಭಿಲೇಖಿಸತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ಅರ್ಜಿದಾರನಿಗೆ ಕಳುಹಿಸತಕ್ಕದ್ದು.

(5) ಈ ಪ್ರಕರಣದ ಅಡಿಯಲ್ಲಿನ ಒಂದು ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗಾಗಿ ಸಕ್ಷಮ ಪ್ರಾಧಿಕಾರವು, ಸಲ್ಲಿಸಲಾದ ಅರ್ಜಿಯ ಮೇಲಿನ ಅನುಮತಿಯನ್ನು ನೀಡಲು ನಿರಾಕರಿಸದಿದ್ದರೆ ಅಥವಾ ನಿರಾಕರಣೆಯನ್ನು ಅರ್ಜಿದಾರನಿಗೆ ತಿಳಿಸದಿದ್ದರೆ ಸಕ್ಷಮ ಪ್ರಾಧಿಕಾರವು ಸಲ್ಲಿಸಲಾದ ಅರ್ಜಿಯ ಮೇಲಿನ ಅನುಮತಿಯನ್ನು ನೀಡಿದೆಯೆಂದು ಭಾವಿಸತಕ್ಕದ್ದು.

**6. ಸಕ್ಷಮ ಪ್ರಾಧಿಕಾರದ ಆದೇಶಗಳ ವಿರುದ್ಧ ಅಪೀಲುಗಳು.-** (1) 5ನೇ ಪ್ರಕರಣದ ಅಡಿಯಲ್ಲಿನ ಸಕ್ಷಮ ಪ್ರಾಧಿಕಾರದ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ಅವನು ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ, ನಿಯಮಿಸಬಹುದಾದ ಅಂಥ ವಿವರಗಳನ್ನು ಒಳಗೊಂಡ ಅಂಥ ಪ್ರಪತ್ರದಲ್ಲಿ ನಿಯಮಿಸಲಾದ ಪ್ರಾಧಿಕಾರಕ್ಕೆ ಅಪೀಲು ಮಾಡಬಹುದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ಒಂದು ಅಪೀಲನ್ನು ಸ್ವೀಕರಿಸಿದ ಮೇಲೆ, ನಿಯಮಿಸಲಾದ ಪ್ರಾಧಿಕಾರವು, ಈ ವಿಷಯದಲ್ಲಿ ಅಹವಾಲು ಹೇಳಿಕೊಳ್ಳಲು ಅರ್ಜಿದಾರನಿಗೆ ಒಂದು ಅವಕಾಶವನ್ನು ಕೊಟ್ಟ ತರುವಾಯ, ಅಪೀಲನ್ನು ಸಾಧ್ಯವಾದಷ್ಟು ಶೀಘ್ರವಾಗಿ ಇತ್ಯರ್ಥ ಮಾಡತಕ್ಕದ್ದು.

(3) ಈ ಪ್ರಕರಣದ ಅಡಿಯಲ್ಲಿ ನಿಯಮಿಸಲಾದ ಪ್ರಾಧಿಕಾರದಿಂದ ಅಪೀಲಿನ ಬಗ್ಗೆ ಹೊರಡಿಸಲಾದ ಪ್ರತಿಯೊಂದು ಆದೇಶವು ಅಂತಿಮವಾಗಿರತಕ್ಕದ್ದು.

**7. ಭೂಮಿಯ ವರ್ಗಾವಣೆಗೆ ಅನುಮತಿ ನೀಡಲು ನಿರಾಕರಿಸುವ ಆದೇಶಗಳು ಜಾರಿಯಲ್ಲಿರುವ ಅವಧಿ.-** ಸಕ್ಷಮ ಪ್ರಾಧಿಕಾರವು ಯಾವುದೇ ಭೂಮಿಯ ವರ್ಗಾವಣೆಗೆ ಅನುಮತಿ ನೀಡಲು ನಿರಾಕರಿಸಿ 5ನೇ ಪ್ರಕರಣದ ಅಡಿಯಲ್ಲಿ ಯಾವುದೇ ಆದೇಶವನ್ನು ಹೊರಡಿಸಿದಲ್ಲಿ ಅಥವಾ ಅಂಥ ಆದೇಶದ ವಿರುದ್ಧ ಒಂದು ಅಪೀಲನ್ನು ಫೈಲು ಮಾಡಿದ್ದು, ನಿಯಮಿಸಲಾದ ಪ್ರಾಧಿಕಾರವು 6ನೇ ಪ್ರಕರಣದ ಅಡಿಯಲ್ಲಿ ಅಂಥ ಆದೇಶವನ್ನು ಸ್ಥಿರೀಕರಿಸಿ ಒಂದು ಆದೇಶವನ್ನು ಮಾಡಿದ್ದಲ್ಲಿ ಅಂಥ ಭೂಮಿಯ ವರ್ಗಾವಣೆಗೆ ಅನುಮತಿ ನೀಡಲು ನಿರಾಕರಿಸುವ ಆದೇಶವು, ಸಂದರ್ಭಾನುಸಾರ, ಸಕ್ಷಮ ಪ್ರಾಧಿಕಾರ ಅಥವಾ ನಿಯಮಿಸಲಾದ ಪ್ರಾಧಿಕಾರವು ಮಾಡಿದ ಆದೇಶದ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಮಾತ್ರ ಜಾರಿಯಲ್ಲಿರತಕ್ಕದ್ದು ಮತ್ತು ಆ ತರುವಾಯ 3ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಅನುಮತಿಗಾಗಿ ಅರ್ಜಿ ಸಲ್ಲಿಸಿದ ವ್ಯಕ್ತಿ ಅಥವಾ ಅವನ ಹಿತಾಸಕ್ತಿಯಲ್ಲಿನ ಉತ್ತರಾಧಿಕಾರಿಯು ಅಂಥ ಭೂಮಿಯನ್ನು ಮಾರಾಟ, ಅಡಮಾನ, ದಾನ, ಗುತ್ತಿಗೆ, ಅಥವಾ ಅನ್ಯಥಾ ವರ್ಗಾವಣೆ ಮಾಡುವುದು ಕಾನೂನು ಸಮ್ಮತವಾಗಿರತಕ್ಕದ್ದು.

***ವಿವರಣೆ.-*** ಈ ಪ್ರಕರಣದ ಅಡಿಯಲ್ಲಿ ಯಾವುದೇ ಭೂಮಿಯ ಸಂಬಂಧದಲ್ಲಿ, ಮೂರು ವರ್ಷಗಳ ಅವಧಿಯನ್ನು ಲೆಕ್ಕ ಹಾಕುವಾಗ ಅಂಥ ಭೂಮಿಯ ಸಂಬಂಧದಲ್ಲಿಯ ಆರ್ಜನಾ ಪ್ರಕ್ರಿಯೆಗಳಿಗೆ ಯಾವುದೇ ನ್ಯಾಯಾಲಯದಿಂದ ತಡೆಯುಂಟಾದ ಅವಧಿಯನ್ನು ಹೊರತುಪಡಿಸತಕ್ಕದ್ದು.

**8. ಭೂಮಿಯ ವರ್ಗಾವಣೆಯ ನೋಂದಣಿಗೆ ನಿರ್ಬಂಧಗಳು.-** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ನೋಂದಣಿ ಅಧಿನಿಯಮ, 1908ರ (1908ರ ಕೇಂದ್ರಾಧಿನಿಯಮ 16) 17ನೇ ಪ್ರಕರಣದ (1)ನೇ ಉಪ-ಪ್ರಕರಣದ (ಎ) ಖಂಡದಿಂದ (ಇ) ಖಂಡದವರೆಗಿನ ಉಪಬಂಧಗಳ ಅಡಿಯಲ್ಲಿ ನೋಂದಣಿಯನ್ನು ಅಗತ್ಯಪಡಿಸಲಾದ ಯಾವುದೇ ದಸ್ತಾವೇಜಿನಲ್ಲಿ ಯಾವುದೇ ಭೂಮಿ ಅಥವಾ 4ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಅದರ ಯಾವುದೇ ಭಾಗವನ್ನು ಮಾರಾಟ, ಆಡಮಾನ, ದಾನ, ಗುತ್ತಿಗೆ ಅಥವಾ ಅನ್ಯಥಾ ವರ್ಗಾಯಿಸಲು ಉದ್ದೇಶಿಸಿದ್ದಲ್ಲಿ, ಅಧಿನಿಯಮದ ಅಡಿಯಲ್ಲಿ ನೇಮಕಗೊಂಡ ಯಾವೊಬ್ಬ ನೋಂದಣಿ ಅಧಿಕಾರಿಯೂ, ವರ್ಗಾವಣೆದಾರನು ಅಂಥ ನೋಂದಣಿ ಅಧಿಕಾರಿಯ ಮುಂದೆ ಅಂಥ ವರ್ಗಾವಣೆಗೆ ಸಕ್ಷಮ ಪ್ರಾಧಿಕಾರಿಯ ಲಿಖಿತ ಅನುಮತಿಯನ್ನು ಹಾಜರುಪಡಿಸಿದ ಹೊರತು ಅಂಥ ಯಾವುದೇ ದಸ್ತಾವೇಜನ್ನು ನೋಂದಾಯಿಸತಕ್ಕದ್ದಲ್ಲ.

**9. ದಂಡಗಳು.-** ಯಾವೊಬ್ಬ ವ್ಯಕ್ತಿಯು 3ನೇ ಪ್ರಕರಣದ ಅಥವಾ 4ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದರೆ, ಅವನು ಮೂರು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

**10. ಕಂಪನಿಗಳಿಂದ ಅಪರಾಧಗಳು.-** (1) ಈ ಪ್ರಕರಣದ ಅಡಿಯಲ್ಲಿ ಒಂದು ಅಪರಾಧವನ್ನು ಮಾಡುವ ವ್ಯಕ್ತಿಯು ಒಂದು ಕಂಪನಿಯಾಗಿದ್ದರೆ, ಅಪರಾಧವು ಘಟಿಸಿದ ಕಾಲದಲ್ಲಿ ಆ ಕಂಪನಿಯು ವ್ಯವಹಾರಗಳ ನಿರ್ವಹಣೆಗಾಗಿ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಅದಕ್ಕೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪನಿಯನ್ನು ಅಪರಾಧದ ದೋಷಿಯೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ವ್ಯವಹರಣೆಗೆ ಗುರಿಯಾಗಲು ಬದ್ಧನಾಗತಕ್ಕದ್ದು ಮತ್ತು ದಂಡಿತನಾಗತಕ್ಕದ್ದು:

ಪರಂತು, ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವನ್ನು ತಡೆಗಟ್ಟಲು ತಾನು ಎಲ್ಲ ರೀತಿಯ ಯುಕ್ತ ಶ್ರದ್ಧೆಯನ್ನು ವಹಿಸಿದ್ದನೆಂದು ಅಂಥ ಯಾವೊಬ್ಬ ವ್ಯಕ್ತಿಯು ರುಜುವಾತುಪಡಿಸಿದರೆ

ಅಂಥ ವ್ಯಕ್ತಿಯನ್ನು ಈ ಉಪ-ಪ್ರಕರಣದಲ್ಲಿ ಒಳಗೊಂಡಿರುವುದಾವುದೂ ಯಾವುದೇ ದಂಡನೆಗೆ ಬದ್ಧನಾಗುವಂತೆ ಮಾಡತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಅಡಿಯಲ್ಲಿಯ ಒಂದು ಅಪರಾಧವನ್ನು ಕಂಪನಿಯು ಮಾಡಿದ್ದಾಗ ಮತ್ತು ಆ ಅಪರಾಧವು ಕಂಪನಿಯ ಯಾವೊಬ್ಬ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಅಥವಾ ಅವನ ಕಡೆಯಿಂದಾದ ಯಾವುದೇ ನಿರ್ಲಕ್ಷ್ಯದ ಕಾರಣದಿಂದ ಸಂಭವಿಸಿತೆಂದು ರುಜುವಾತಾದರೆ, ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ದೋಷಿಯೆಂದು ಭಾವಿಸತಕ್ಕದ್ದು ಮತ್ತು ಅವನು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗಲು ಬದ್ಧನಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು.

***ವಿವರಣೆ.-*** ಈ ಪ್ರಕರಣದ ಉದ್ದೇಶಗಳಿಗಾಗಿ,-

(ಎ) "ಕಂಪನಿ" - ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಇದು ಒಂದು ಫರ್ಮು ಅಥವಾ ವ್ಯಕ್ತಿಗಳ ಇತರ ಸಂಸ್ಥೆಯನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಒಂದು ಫರ್ಮಿನ ಸಂಬಂಧದಲ್ಲಿ "ನಿರ್ದೇಶಕ" ಎಂದರೆ, ಫರ್ಮಿನ ಒಬ್ಬ ಪಾಲುದಾರ.

**11. ನಿಯಮಗಳ ರಚನಾಧಿಕಾರ.-** (1) ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸಲು ನಿಯಮಗಳನ್ನು ರಚಿಸಬಹುದು.

(2) ಪೂರ್ವೋಕ್ತ ಉಪಬಂಧದ ಸಾಮಾನ್ಯತೆಗೆ ಪ್ರತಿಕೂಲವಾಗದಂತೆ ಅಂಥ ನಿಯಮಗಳು, ಈ ಮುಂದಿನ ಎಲ್ಲ ಅಥವಾ ಯಾವುವೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ: -

(ಎ) 5ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಮಾಡಲಾದ ಒಂದು ಅರ್ಜಿಯಲ್ಲಿ ಒಳಗೊಂಡಿರತಕ್ಕ ವಿವರಗಳು;

(ಬಿ) 6ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ಅಪೀಲು ಫೈಲು ಮಾಡಬಹುದಾದ ಪ್ರಾಧಿಕಾರ, ಅಂಥ ಅಪೀಲನ್ನು ಫೈಲು ಮಾಡಬಹುದಾದ ಪ್ರಪತ್ರ, ಮತ್ತು ಅಂಥ ಅಪೀಲಿನಲ್ಲಿ ಒಳಗೊಂಡಿರತಕ್ಕ ವಿವರಗಳು;

(ಸಿ) ನಿಯಮಿಸುವ ಅಗತ್ಯವಿರುವ ಅಥವಾ ನಿಯಮಿಸಬಹುದಾದ ಇತರ ಯಾವುದೇ ವಿಷಯ.

(3) ಈ ಪ್ರಕರಣದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಲಾದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನಮಂಡಲವು ಅಧಿವೇಶನದಲ್ಲಿದ್ದರೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಒಂದು ಅಧಿವೇಶನ ಅಥವಾ ಎರಡು ಅಥವಾ ಹೆಚ್ಚಿನ ಅನುಕ್ರಮ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಪೂರ್ವೋಕ್ತ ಅನುಕ್ರಮ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಉಭಯ ಸದನಗಳು ಒಪ್ಪಿದರೆ, ಅಥವಾ ನಿಯಮವನ್ನು ರದ್ದುಪಡಿಸಬೇಕೆಂದು ಉಭಯ ಸದನಗಳು ಒಪ್ಪಿದರೆ ತದನಂತರ, ನಿಯಮವು, ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಡಿಯಲ್ಲಿ ಈ ಹಿಂದೆ ಮಾಡಲಾದ ಯಾವುದರ ಮಾನ್ಯತೆಗೂ ಪ್ರತಿಕೂಲವಾಗಿರತಕ್ಕದ್ದಲ್ಲ.

* * * *